# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ
## ಸಿ.ಸಿಃ 1477/2022

ಫ್ರಾಸಾ–10, ಚಾಸಾ–10

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ. ರಾಜೇಂದ್ರ |
| ತಂದೆಯ ಹೆಸರು | : | ಎಂ. ಮಹದೇವು |
| ವಯಸ್ಸು | : | 57ವರ್ಷ |
| ಉದ್ಯೋಗ | : | ಎ.ಸಿ.ಪಿ |
| ವಾಸ | : | ಮೈಸೂರು |

ಸಾಕ್ಷಿಗೆ ದಿನಾಂಕಃ 03.08.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2017 ರಿಂದ 2019ರವೆಗೆ ಚಾಮರಾಜನಗರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿನಾಂಕಃ 30.08.2018 ರಂದು ಈ ಕೇಸಿನ ಕಡತವನ್ನು ಚಾಸಾ–9ರವರಿಂದ ಪಡೆದುಕೊಂಡು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 02.02.2019 ರಂದು ಈ ಪ್ರಕರಣದ ಆರೋಪಿ ವೆಂಕಟೇಶ್ ಮತ್ತು ಚಕ್ರವರ್ತಿ ರವರುಗಳನ್ನು ಮೈಸೂರಿನ ಸಿಸಿಬಿ ರವರು ಹಲವು ಕೇಸುಗಳಲ್ಲಿ ದಸ್ತಗಿರಿ ಮಾಡಿರುವ ವಿಚಾರ ತಿಳಿದು, ಸದರಿ ಆರೋಪಿಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ಪ್ರಕರಣಕ್ಕೆ ಸಂಬಂಧಪಟ್ಟಿದ್ದರಿಂದ ಅವರನ್ನು ಎರಡು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೊಕೊಂಡಿರುತ್ತೇನೆ. ಆರೋಪಿತರನ್ನು ನನ್ನ ಸುಪರ್ದಿಗೆ ಪಡೆದುಕೊಂಡು ಆರೋಪಿತರ ಹೇಳಿಕೆಯನ್ನು ಅನುಸರಿಸಿ, ಆರೋಪಿತರು ಕಳ್ಳತನ ಮಾಡಿರುವ ಜಾಗವನ್ನು ಮತ್ತು ಕಬ್ಬಿಣದ ಕ್ಯಾಶ್ ಲಾಕರ್ ಅನ್ನು ಬಿಸಾಡಿರುವ ಜಾವನ್ನು ತೋರಿಸಿಕೊಡುವುದಾಗಿ ಹೇಳಿಕೆ ನೀಡಿರುತ್ತಾರೆ, ಅದರಂತೆ ಪಂಚರಾದ ಚಾಸಾ–6 ಮತ್ತು 7ರವರು ಸಮಕ್ಷಮ

ಆರೋಪಿಗಳು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ದಿಃ 02.02.2019 ರಂದು ಮಃ 3 ಗಂಟೆಯಿಂದ 3.30ರವರೆಗೆ ಸ್ಥಳ ಮಹಜರ್ ಬರೆಸಿರುತ್ತೇನೆ.

ಸದರಿ ಮಹಜರ್ ಅನ್ನು ಈಗ ನಾನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ಗುರ್ತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.7(ಡಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ಹೇಳಿ ಸಾಕ್ಷಿಯು ನಿಪಿ-5ರಲ್ಲಿರುವ ಒಟ್ಟು ಆರು ಫೋಟೋಗಳನ್ನು ನೋಡಿ ಗುರ್ತಿಸಿರುತ್ತಾರೆ. ಆ ನಂತರ ಆರೋಪಿಗಳ ಮಾಹಿತಿ ಮೇರೆಗೆ ಆರೋಪಿತರು ಕಳ್ಳತನ ಮಾಡಿ ಹಣವನ್ನು ದೋಚಿಕೊಂಡು ಕ್ಯಾಶ್ ಬಾಕ್ಸನ್ನು ಎಸಗಿದ್ದ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ಪಂಚರಾದ ಚಾಸಾ-6 ಮತ್ತು 7ರವರ ಸಮಕ್ಷಮ ಆರೋಪಿತರು ತೋರಿಸಿಕೊಟ್ಟ ಸ್ಥಳಕ್ಕೆ ಹೋದಾಗ ಸದರಿ ಸ್ಥಳವು ಚಾಮರಾಜನಗರ ಸರ್ಕಾರಿ ಮೆಡಿಕಲ್ ಕಾಲೇಜ್ ಹತ್ತಿರವಿರುವ ಯಡಬೆಟ್ಟದ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಗುಡ್ಡದಲ್ಲಿ ಬೆಳೆದ ಕಾಡುಜಾತಿಯ ಗಿಡದ ಬಳಿ ಆರೋಪಿತರು ಕರೆದುಕೊಂಡು ಹೋಗಿ ಕ್ಯಾಶ್ ಬಾಕ್ಸನ್ನು ಎಸಗಿದ್ದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚರ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿ, ನ್ಯಾಯಾಲಯದ ಮುಂದೆ ಇರುವ ಮು.ಮಾ-1ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಮಹಜರ್ ಅನ್ನು ಪಂಚರ ಸಮಕ್ಷಮ ಮಃ 3.30 ರಿಂದ 4.15ರವರೆಗೆ ಜರುಗಿಸಿದ್ದು, ಅದನ್ನು ಈಗ ನಾನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-6 ಎಂದು ಗುರ್ತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು. ನಿಪಿ-6ರ ಸಮಯದಲ್ಲಿ ಫೋಟೋಗಳನ್ನು ತೆಗಸಿರುತ್ತೇನೆ ಎಂದು ಹೇಳಿ ಸಾಕ್ಷಿಯು ನಿಪಿ-8ರ ಫೋಟೋಗಳನ್ನು ನೋಡಿ ಗುರ್ತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-1ನ್ನು ನೋಡಿ ಗುರ್ತಿಸಿರುತ್ತಾರೆ.

ದಿಃ 02.02.2019 ರಂದು ಆರೋಪಿಗಳನ್ನು ಚಾಸಾ-1ರವರು ಗುರ್ತಿಸಿ ಅವರ ವಿವರ ತಿಳಿದುಕೊಂಡ ನಂತರ ಚಾಸಾ-1ರವರ ಮುಂದುವರೆದ ಹೇಳಿಕೆಯನ್ನು

ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-6 ಮತ್ತು 7ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿಃ 03.02.2019 ರಂದು ಆರೋಪಿಗಳನ್ನು ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ದಿಃ 14.01.2019 ರಂದು ಉಳಿದ ಆರೋಪಿಗಳಾದ ಗಂಗಾಧರ ಮತ್ತು ಗಜೇಂದ್ರ ರವರುಗಳನ್ನು ಪತ್ತೆ ಮಾಡುವ ಉದ್ದೇಶಕ್ಕಾಗಿ ಠಾಣಾ ಸಿಬ್ಬಂದಿಗಳಾದ ಮಹದೇವಸ್ವಾಮಿರವರನ್ನು ನೇಮಕ ಮಾಡಿದ್ದು, ಸದರಿರವರು ಮೈಸೂರು ಮತ್ತು ಬೆಂಗಳೂರು ಗಳಲ್ಲಿ ಆರೋಪಿತರ ತಲಾಸ್ ಮಾಡಿ ನನ್ನ ಮುಂದೆ ಹಾಜರಾಗಿ ಮೂರು ವರದಿಗಳನ್ನು ಪ್ರತ್ಯೇಕ ದಿನಗಳಂದು ನೀಡಿರುತ್ತಾರೆ, ಅವುಗಳನ್ನು ಈಗ ನಾನು ನೋಡುತ್ತಿದು, ಅವುಗಳನ್ನು ಈಗಾಗಲೇ ನಿಪಿ-12 ರಿಂದ 14 ಎಂದು ಗುರುತಿಸಲಾಗಿದೆ. ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ-12(ಬಿ) ರಿಂದ 14(ಬಿ) ಎಂದು ಗುರುತಿಸಲಾಯಿತು.

ಆ ನಂತರ ಆರೋಪಿರಾದ ಗಂಗಾಧರ ಮತ್ತು ಗಜೇಂದ್ರ ಪತ್ತೆ ಆಗದ ಕಾರಣದಿಂದ ಇಬರ್ಬ್ಬರೂ ಆರೋಪಿತರು ತಲೆಮರೆಸಿಕೊಂಡ ಆರೋಪಿತರು ಎಂದು ಪರಿಗಣಿಸಿಕೊಳ್ಳುವಂತೆ ಘನ ನ್ಯಾಯಾಲಯದ ಮುಂದೆ ಅಂತಿಮ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಆರೋಪಿ 3 ಮತ್ತು 4ರವರುಗಳನ್ನು ನೋಡಿದರೇ ಗುರ್ತಿಸುತ್ತೇನೆ, 3ನೇ ಆರೋಪಿತನ ಪರವಾಗಿ ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು, ಗುರ್ತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ವಿ.ಸಿಯ ಮೂಲಕ ಹಾಜರಾದ 4ನೇ ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟೀಸವಾಲುಃ ಶ್ರೀ.ಸಿ.ಎಸ್. ಎಸ್.ವಕೀಲರಿಂದಃ**

ದಿನಾಂಕಃ 30.08.2018 ರಂದು ಈ ಕೇಸಿನ ಕಡತವನ್ನು ಚಾಸಾ-9ರವರಿಂದ ಪಡೆದುಕೊಂಡು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 02.02.2019

ರಂದು ಈ ಪ್ರಕರಣದ ಆರೋಪಿ ವೆಂಕಟೇಶ್ ಮತ್ತು ಚಕ್ರವರ್ತಿ ರವರುಗಳನ್ನು ಮೈಸೂರಿನ ಸಿಸಿಬಿ ರವರು ಹಲವು ಕೇಸುಗಳಲ್ಲಿ ದಸ್ತಗಿರಿ ಮಾಡಿರುವ ವಿಚಾರ ತಿಳಿದು, ಸದರಿ ಆರೋಪಿಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ಪ್ರಕರಣಕ್ಕೆ ಸಂಬಂಧಪಟ್ಟಿದ್ದರಿಂದ ಅವರನ್ನು ಎರಡು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೊಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರನ್ನು ನನ್ನ ಸುಪರ್ದಿಗೆ ಪಡೆದುಕೊಂಡು ಆರೋಪಿತರ ಹೇಳಿಕೆಯನ್ನು ಅನುಸರಿಸಿ, ಆರೋಪಿತರು ಕಳ್ಳತನ ಮಾಡಿರುವ ಜಾಗವನ್ನು ಮತ್ತು ಕಬ್ಬಿಣದ ಕ್ಯಾಶ್ ಲಾಕರ್ ಅನ್ನು ಬಿಸಾಡಿರುವ ಜಾವನ್ನು ತೋರಿಸಿಕೊಡುವುದಾಗಿ ಹೇಳಿಕೆ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಪಂಚರಾದ ಚಾಸಾ–6 ಮತ್ತು 7ರವರು ಸಮಕ್ಷಮ ಆರೋಪಿಗಳು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ದಿಃ 02.02.2019 ರಂದು ಮಃ 3 ಗಂಟೆಯಿಂದ 3.30ರವರೆಗೆ ಸ್ಥಳ ಮಹಜರ್ ಬರೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ನಂತರ ಆರೋಪಿಗಳ ಮಾಹಿತಿ ಮೇರೆಗೆ ಆರೋಪಿತರು ಕಳ್ಳತನ ಮಾಡಿ ಹಣವನ್ನು ದೋಚಿಕೊಂಡು ಕ್ಯಾಶ್ ಬಾಕ್ಸನ್ನು ಎಸಗಿದ್ದ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ಪಂಚರಾದ ಚಾಸಾ–6 ಮತ್ತು 7ರವರ ಸಮಕ್ಷಮ ಆರೋಪಿತರು ತೋರಿಸಿಕೊಟ್ಟ ಸ್ಥಳಕ್ಕೆ ಹೋದಾಗ ಸದರಿ ಸ್ಥಳವು ಚಾಮರಾಜನಗರ ಸರ್ಕಾರಿ ಮೆಡಿಕಲ್ ಕಾಲೇಜ್ ಹತ್ತಿರವಿರುವ ಯಡಬೆಟ್ಟದ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಗುಡ್ಡದಲ್ಲಿ ಬೆಳೆದ ಕಾಡುಜಾತಿಯ ಗಿಡದ ಬಳಿ ಆರೋಪಿತರು ಕರೆದುಕೊಂಡು ಹೋಗಿ ಕ್ಯಾಶ್ ಬಾಕ್ಸನ್ನು ಎಸಗಿದ್ದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚರ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಇರುವ ಮು.ಮಾ–1ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಮಾನತ್ತು ಮಹಜರ್ ಅನ್ನು ಪಂಚರ ಸಮಕ್ಷಮ ಮಃ 3.30 ರಿಂದ 4.15ರವರೆಗೆ

ಜರುಗಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–6ರ ಸಮಯದಲ್ಲಿ ಫೋಟೋಗಳನ್ನು ತೆಗಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 02.02.2019 ರಂದು ಆರೋಪಿಗಳನ್ನು ಚಾಸಾ–1ರವರು ಗುರ್ತಿಸಿ ಅವರ ವಿವರ ತಿಳಿದುಕೊಂಡ ನಂತರ ಚಾಸಾ–1ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ  ಚಾಸಾ–6 ಮತ್ತು 7ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.. ನಂತರ ದಿಃ 03.02.2019 ರಂದು ಆರೋಪಿಗಳನ್ನು ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 14.01.2019 ರಂದು ಉಳಿದ ಆರೋಪಿಗಳಾದ ಗಂಗಾಧರ ಮತ್ತು ಗಜೇಂದ್ರ ರವರುಗಳನ್ನು ಪತ್ತೆ ಮಾಡುವ ಉದ್ದೇಶಕ್ಕಾಗಿ ಠಾಣಾ ಸಿಬ್ಬಂದಿಗಳಾದ ಮಹದೇವಸ್ವಾಮಿರವರನ್ನು ನೇಮಕ ಮಾಡಿದ್ದು, ಸದರಿರವರು ಮೈಸೂರು ಮತ್ತು ಬೆಂಗಳೂರು ಗಳಲ್ಲಿ ಆರೋಪಿತರ ತಲಾಸ್ ಮಾಡಿ ನನ್ನ ಮುಂದೆ ಹಾಜರಾಗಿ ಮೂರು ವರದಿಗಳನ್ನು ಪ್ರತ್ಯೇಕ ದಿನಗಳಂದು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ನಂತರ ಆರೋಪಿರಾದ ಗಂಗಾಧರ ಮತ್ತು ಗಜೇಂದ್ರ ಪತ್ತೆ ಆಗದ ಕಾರಣದಿಂದ ಇಬರಿಬ್ಬರೂ ಆರೋಪಿತರು ತಲೆಮರೆಸಿಕೊಂಡ ಆರೋಪಿತರು ಎಂದು ಪರಿಗಣಿಸಿಕೊಳ್ಳುವಂತೆ ಘನ ನ್ಯಾಯಾಲಯದ ಮುಂದೆ ಅಂತಿಮ ದೋಷಾರೋಪಣೆ ಪಟ್ಟಿಯನ್ನು  ಸಲ್ಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.